**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 164/2018**

ಪಿ ಡಬ್ಲ್ಯೂ-1

**ದಿನಾಂಕ 26-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಪಿ ಡಿ ಪ್ರತಿ ವಾದಿ 1 ರಿಂದ 4 ಪರ ವಕೀಲರುಃ**

ಈ ದಾವೆಯನ್ನು ನಾನು 13 ಗುಂಟೆ ಜಮೀನಿಗೆ ಸಲ್ಲಿಸಿದ್ದೇನೆ. ಸದರಿ ಆಸ್ತಿ ನಮಗೆ ಪಿತ್ರಾರ್ಜಿತವಾಗಿ ನಮ್ಮ ತಂದೆಯ ಮುಖಾಂತರ ಬಂದಿರುತ್ತದೆ. ನಮ್ಮ ತಾತ ರಾಮೇಗೌಡರಿಗೆ ಒಟ್ಟು 5 ಜನ ಮಕ್ಕಳು ಇಬ್ಬರು ಗಂಡು ಮಕ್ಕಳು ಮತ್ತು 3 ಹೆಣ್ಣು ಮಕ್ಕಳು. ನಮ್ಮ ತಾತನ ಜಮೀನನ್ನು ನಾವು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದೇವೆ.

ಅದೇ ರೀತಿ 1 ನೇ ಪ್ರತಿವಾದಿಯ ಗಂಡ ಎಚ್ ಆರ್ ಸಂಪತ್ ಕುಮಾರ ರವರಿಗೆ ಸ ನಂ. 582/2 ರಲ್ಲಿ 13 ಗುಂಟೆ ಜಮೀನು ಬಂದಿರುತ್ತದೆ. ಎಚ್ ಆರ್ ಸಂಪತ್ ಕುಮಾರ ಅವರ ಭಾಗಕ್ಕೆ ಬಂದಿರುವ ಸ ನಂ. 582/2 ರಲ್ಲಿನ 13 ಗುಂಟೆಯ ಚೆಕ್ ಬಂದಿ ನನಗೆ ಗೊತ್ತಿರುವುದಿಲ್ಲ. ನಾವು ದಾವೆಯ ಚೆಕ್ ಬಂದಿಯನ್ನು ಅನುಭವದ ಆಧಾರದ ಮೇಲೆ ಹಾಕಿರುತ್ತೇವೆ. ದಾವಾ ಜಮೀನಿನ ಅನುಭವ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

ನಮ್ಮ ತಾತನಿಗೆ ಸ ನಂ. 582/2 ರಲ್ಲಿ ಒಟ್ಟು 2 ಎಕರೆ 8 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ 2 ಎಕರೆ 8 ಗುಂಟೆ ಜಮೀನಿನ ಪೈಕಿ ಹೆಬ್ಬಾಲು ಗ್ರಾಮ ಪಂಚಾಯಿತಿರವರು ಜನತಾ ನಿವೇಶನಗಳಿಗಾಗಿ 1 ಎಕರೆ 22 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುತ್ತಾರೇ ಎಂದರೆ ಸರಿ. ಸದರಿ ಹೆಬ್ಬಾಲುಗ್ರಾಮ ಪಂಚಾಯತಿಯವರು ಸ್ವಾಧೀನಪಡಿಸಿಕೊಂಡಿರುವ 1 ಎಕರೆ 22 ಗುಂಟೆ ಜಮೀನು ಈಗಲೂ ಸಹ ಪ್ರತ್ಯೇಕವಾಗಿ ದುರಸ್ತಿಯಾಗಿರುವುದಿಲ್ಲ.

ಹೆಬ್ಬಾಲು ಗ್ರಾಮಪಂಚಾಯಿತಿಯವರು 1 ಎ 22 ಗುಂಟೆ ಜೊತೆಗೆ ಹೆಚ್ಚುವರಿಯಾಗಿ ನಮಗೆ ಸೇರಿದ ದಾವಾ ಸರ್ವೇ ನಂಬರನಲ್ಲಿ 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡು ಮಲ್ಲೇಶ, ಸೋಮನಾಯಕ ಮತ್ತು ಸುಬ್ಬನಾಯಕರವರಿಗೆ 3 ನಿವೇಶನಗಳನ್ನು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2 ಎಕರೆ 8 ಗುಂಟೆ ಒಟ್ಟು ಜಮೀನನ್ನು ನ್ಯಾಯಾಲಯದ ನಿಯೋಜಕರ ಮುಖಾಂತರ ಅಳತೆ ಮಾಡಿಸಿ ಅನುಭವವನ್ನು ಪರೀಕ್ಷೆ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಅವರ ಜಮೀನನ್ನು ಅಳತೆ ಮಾಡಿಸಿಕೊಳ್ಳಲಿ ಎಂದು ತಿಳಿಸಿರುತ್ತಾರೆ.

ಹೆಬ್ಬಾಲು ಗ್ರಾಮಪಂಚಾಯಿತಿಯವರು ನಮ್ಮ ಕುಟುಂಬಕ್ಕೆ ಸೇರಿದ 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿದ್ದರು ಸಹ ನಾವು ನಮಗೆ ಬೇಕಾದ ಕಡೆ 13 ಗುಂಟೆಯನ್ನು ಪ್ರತಿವಾದಿಗಳಿಗೆ ತಿಳಿಯದ ಹಾಗೆ ಅಕ್ರಮವಾಗಿ ತತ್ಕಾಲ ಪೋಡಿ ಮಾಡಿಸಿಕೊಡಿಂರುತ್ತೇವೆ ಎಂದರೆ ಸರಿಯಲ್ಲ. ಸದರಿ ತತ್ಕಾಲ್ ಪೋಡಿಗೆ ಪ್ರತಿವಾದಿಯವರು ತಕರಾರನ್ನು ಸಹ ಸದರಿ ಪೋಡಿಯನ್ನು ರದ್ದು ಮಾಡುವಂತೆ ಸಲ್ಲಿಸಿರುತ್ತಾರೆ ಎಂದರೆ ಗೋತ್ತಿರುವುದಿಲ್ಲ.

ನಾವು ದಾವಾ ಸ್ವತ್ತಿನ ಚೆಕ್ ಬಂದಿಯನ್ನು ಯಾವ ಮೂಲ ದಾಖಲೆಗಳು ಇಲ್ಲದೆ ನಮಗೆ ಬೇಕಾದ ಹಾಗೆ ಸೃಷ್ಟಿ ಮಾಡಿಕೊಂಡು ದಾವೆ ಸಲ್ಲಿಸಿದ್ದೇವೆ ಎಂದರೆಸರಿಯಲ್ಲ. ಹೆಬ್ಬಾಲು ಗ್ರಾಮಪಂಚಾಯಿತಿಯವರು ಒತ್ತುವರಿ ಮಾಡಿರುವ 6 ಗುಂಟೆ ಜಮೀನನ್ನು ಪ್ರತಿವಾದಿಗಳ ಕಡೆಗೆ ತೋರಿಸಿ ಉಳಿಕೆ ಜಮೀನನ್ನು ನಮಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಸಲ್ಲಿಸಿರುವ ತತ್ಕಾಲ್ ತಕರಾರು ಪೋಡಿ ತಹಶೀಲ್ದಾರವರ ಬಳಿ ವಿಚಾರಣೆ ಹಂತದಲ್ಲಿದೆ ಎಂದರೆ ಸರಿಯಲ್ಲ. ನಾವು ಸಲ್ಲಿಸಿರುವ ಚೆಕ್ ಬಂದಿಗೆ ಸಂಬಂಧಿಪಟ್ಟಂತೆ ಯಾವುದೇ ಸೂಕ್ತ ದಾಖಲೆಗಳನ್ನು ನೀಡದ ಕಾರಣ ನಾವು ದಾವೆಯಲ್ಲಿ ಕೇಳಿದ ಪರಿಹಾರವನ್ನು ಹೊಂದಲು ಅರ್ಹರಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ  ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

(ಚಂದನ್.ಎಸ್)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ